**ಕರ್ನಾಟಕ ಸರ್ಕಾರ**
**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/44/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:21.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19 ಹಿನ್ನೆಲೆಯಲ್ಲಿ ಸಂಸ್ಥೆಗಳಲ್ಲಿ ಕೌನ್ಸಿಲರ್‌ಗಳ ಸೇವೆಯನ್ನು ನಿರಂತರವಾಗಿ ಪಡೆಯುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-19 ಹಿನ್ನೆಲೆಯಲ್ಲಿ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿರುವ ಮಕ್ಕಳಲ್ಲಿ ಭಯ ಮತ್ತು ಆತಂಕವನ್ನು ಹಾಗೂ ಕೋವಿಡ್ ಸಂಬಂಧ ಫೋಬಿಯಾಗಳನ್ನು ಹೋಗಲಾಡಿಸಲು ಕೌನ್ಸಿಲರ್‌ಗಳ ಸೇವೆ ತುಂಬಾ ಅವಶ್ಯಕವಾಗಿದ್ದು, ಅವರ ಸೇವೆಯನ್ನು ನಿರಂತರವಾಗಿ ಪಡೆಯಬೇಕಾಗಿರುತ್ತದೆ.

ಅಲ್ಲದೇ ಮಕ್ಕಳ ಪಾಲನಾ ಸಂಸ್ಥೆಗಳಿಂದ ಕೋವಿಡ್-19 ಹಿನ್ನೆಲೆಯಲ್ಲಿ ಪೋಷಕರ ವಶಕ್ಕೆ ನೀಡಲಾಗಿರುವ ಮಕ್ಕಳ ವಿಷಯದಲ್ಲೂ ಅಂದರೆ ಅವರ ಕುಟುಂಬದಲ್ಲಿ ಅವರಿಗೆ ಪೂರಕ ವಾತಾವರಣವಿಲ್ಲದ ಪಕ್ಷದಲ್ಲಿ ಅಂತಹ ಮಕ್ಕಳೊಂದಿಗೆ ಮಾತನಾಡಿ ಅವರಲ್ಲಿರುವ ಆತಂಕವನ್ನು ಗುರುತಿಸಿ ಅವಶ್ಯವಿದ್ದಲ್ಲಿ ಅವರನ್ನು ಪುನ: ಸಂಸ್ಥೆಗೆ ಕರೆತರಲು ಅಥವಾ ಪೋಷಕರಿಗೆ ಕೌನ್ಸಿಲಿಂಗ್ ನೀಡಲು ಇದರಿಂದ ಮಕ್ಕಳು ಕುಟುಂಬದ ಒಳ್ಳೆಯ ವಾತಾವರಣದಲ್ಲಿ ಬೆಳೆಯುವಂತೆ ಮಾಡಲು ಕೌನ್ಸಿಲರ್‌ಗಳ ಸೇವೆ ಅತ್ಯಾವಶ್ಯಕವಾಗಿರುತ್ತದೆ.

ಮಕ್ಕಳ ಪಾಲನಾ ಸಂಸ್ಥೆಗಳಿಂದ ಮಕ್ಕಳನ್ನು ಪೋಷಕರ ವಶಕ್ಕೆ ನೀಡಿದ ಸಂದರ್ಭಗಳಲ್ಲಿ ಅವರವರ ಕುಟುಂಬಗಳಲ್ಲಿಯೂ ಸಹ ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳು ಅನುಪಾಲನೆಯಾಗಲು ಮಕ್ಕಳ ಪೊಷಕರಿಗೂ ಸಹ ಕೋವಿಡ್-19 ಬಗ್ಗೆ ಅರಿವು ಮೂಡಿಸಲು ಮತ್ತು ಕೋವಿಡ್-19 ಮುನ್ನೆಚ್ಚರಿಕಾ ಕ್ರಮಗಳನ್ನು ಅನುಪಾಲಿಸಲು ಕೌನ್ಸಿಲರ್‌ಗಳ ಸೇವೆ ಅವಶ್ಯಕವಾಗಿರುತ್ತದೆ.

ಆದ್ದರಿಂದ ಒಂದು ವೇಳೆ ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಅವರ ಸೇವೆಯನ್ನು ಬೇರೆಡೆಗೆ ಒದಗಿಸಿದ್ದರೆ ಅಥವಾ ನಿಯೋಜಿಸಿದ್ದರೆ, ಮೇಲಿನ ಮಾಹಿತಿಯನ್ನು ಜಿಲ್ಲಾಡಳಿತದ ಗಮನಕ್ಕೆ ತಂದು ಸಮಗ್ರ ಮಕ್ಕಳ ರಕ್ಷಣಾ ಯೋಜನೆಯ ಕೌನ್ಸಿಲರ್‌ಗಳ ಸೇವೆಯನ್ನು ಮಕ್ಕಳ ಪಾಲನಾ ಸಂಸ್ಥೆಗಳಿಗೆ ಪುನ: ಹಿಂತಿರುಗಿ ಪಡೆಯಲು ಕ್ರಮ ಕೈಗೊಳ್ಳುವುದು(ಜಿಲ್ಲಾಡಳಿತಕ್ಕೆ ಆರೋಗ್ಯ ಇಲಾಖೆಯಿಂದ ಅಥವಾ ಬೇರೆ ಮೂಲಗಳಿಂದಲೂ ಸಹ ಸದರಿ ಸೇವೆಯನ್ನು ಪಡೆಯಲು ಅವಕಾಶವಿರುವುದನ್ನು ಗಮನಿಸಬಹುದು).

ಕೋವಿಡ್-19ರ ತುರ್ತು ಪರಿಸ್ಥಿತಿಯಲ್ಲಿ ಮಕ್ಕಳಿಗೆ ಕೌನ್ಸಿಲಿಂಗ್ ಸೇವೆಯು 24*7 ಇರುವಂತೆ ಸೂಕ್ತ ವ್ಯವಸ್ಥೆಯನ್ನು ಆಯಾ ಜಿಲ್ಲಾ ಮಟ್ಟದಲ್ಲಿಯೇ ಮಾಡಿಕೊಳ್ಳತಕ್ಕದ್ದು.

ತಮ್ಮ ವಿಶ್ವಾಸಿ,

24.04.2020
ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.